# ಡಾ. ಸುಲಭಾ ದತ್ತ ನೀರಲಗಿ ದತ್ತಿ




ಧಾರವಾಡ ೬ – ಸಂಗೀತ ಜಗತ್ತಿನಲ್ಲಿ ಸಾಧನೆಯ ಪರಾಕಾಷ್ಠೆ ತಲುಪುವದೆಂದರೆ ಒಂದು ತಪಸ್ಸು ಮಾಡಿದಂತೆ. ಋಷಿ–ಮುನಿಗಳು ತಪಸ್ಸು ಮಾಡಲು ಕುಳಿತರೆ ಸಾಕ್ಷಾತ್ಕಾರ ಪಡೆಯಲು ಅವರ ಗಡ್ಡ ನೆಲ ಮುಟ್ಟುತ್ತಿದ್ದವಂತೆ. ಅಂತೆಯೇ ವಿಶ್ವವಿಖ್ಯಾತ ಸಂಗೀತಗಾರರನ್ನು ಗಾನಲೋಕಕ್ಕೆ ನೀಡಿದ ಧಾರವಾಡದ ನೆಲ ಗಾನಗಂಗೆಯ ತಪೋಭೂಮಿ ಎನಿಸಿದೆ ಎಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ ೫–೬–೨೦೧೯ ರಂದು ಡಾ. ಸುಲಭಾ ದತ್ತ ನೀರಲಗಿ ದತ್ತಿ ಅಂಗವಾಗಿ ಬುಧವಾರ ಏರ್ಪಡಿಸಿದ್ದ ಪ್ರಖ್ಯಾತ ಹಿಂದೂಸ್ತಾನಿ ಗಾಯಕಿ ಸುಲಭಾ ಅವರ ಜನ್ಮದಿನ ಹಾಗೂ ಅವರ ಗುರುಮಾತೆ ಗಾನವಿದೂಷಿ ಗಂಗೂಬಾಯಿ ಹಾನಗಲ್ ಸ್ಮರಣೋತ್ಸವದ ಸಂಗೀತ ಸಂಜೆ ಹಾಗೂ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾನಾಡುತ್ತಿದ್ದರು.

ರಾಜ–ಮಹಾರಾಜರಿಗೆ ಆಯಾ ರಾಜ್ಯದ ಪ್ರಜೆಗಳು ಮಾತ್ರ ಗೌರವ, ಆದರ, ಮರ್ಯಾದೆ ಕೊಡುತ್ತಾರೆ. ಆದರೆ ಸಂಗೀತದಲ್ಲಿ ಪ್ರಾವಿಣ್ಯತೆ ಪಡೆದವರಿಗೆ ಪ್ರಪಂಚದಾದ್ಯಂತದ ಸಂಗೀತಪ್ರಿಯ ಅಭಿಮಾನಿಗಳು ಸತ್ಕಾರ, ಸನ್ಮಾನ ಮಾಡಿ ಕೃತಾರ್ಥರಾಗುತ್ತಾರೆ. ಸೂರ್ಯ–ಚಂದ್ರ ಇರುವವರೆಗೆ ಸಂಗೀತ ಜೀವಂತವಾಗಿರುತ್ತದೆ ಎನ್ನುವದಕ್ಕೆ ಈ ಕಾರ್ಯಕ್ರಮ ಸಾಕ್ಷಿ. ಸಂಗೀತ ಕ್ಷೇತ್ರಕ್ಕೆ ಧಾರವಾಡ, ಕುಂದಗೋಳ, ಗದಗ ನೀಡಿದ ಕೊಡುಗೆ ಅಜರಾಮರವಾಗಿರುತ್ತದೆ ಎಂದೂ ಅವರು ಹೇಳಿದರು.

ಅತಿಥಿಗಳಾಗಿದ್ದ ಮಾಜಿ ಮಹಾಪೌರ ಡಾ. ಹನುಮಂತರಾವ ಡಂಬಳ ಅವರು  ಸುಲಭಾ ತಾನು ದುಡಿದ ಎಲ್ಲ ಹಣ ವೆಚ್ಚ ಮಾಡಿ ತನ್ನ ಮನೆಯನ್ನೇ ಸಂಗೀತ ಸಭಾಗೃಹವನ್ನಾಗಿಸಿದ್ದು, ಇತರ ಕಲಾವಿದರಿಗೆಲ್ಲಾ ಮಾದರಿ. ಒಂದು ಸರಕಾರ ಮಾಡದ ಕೆಲಸವನ್ನು ಮಾಡಿರುವ ಸುಲಭಾ ಅವರಲ್ಲಿಯ ಸಂಗೀತದ ಬಗ್ಗೆ ಇರುವ ಅಪಾರ ಆಸಕ್ತಿಗೆ ಅವರು ನಿರ್ಮಿಸಿದ 'ಮ್ಯೂಜಿಕ್ ಹಾಲ್' ದ್ಯೋತಕವಾಗಿದೆ ಎಂದರು.

ಇನ್ನೊರ್ವ ಅತಿಥಿ ಹಿರಿಯ ಸಂಗೀತಜ್ಞ ಪಂ. ಶೇಷಗಿರಿ ದಂಡಾಪುರ ಧಾರವಾಡದಲ್ಲಿ ಒಂದೂ ಸಂಗೀತ ಶಾಲೆ ಇರದಾಗ ನಾನು ಆರಂಭಿಸಿದ್ದ 'ಧರ್ಮಾರ್ಥ ಸಂಗೀತ ಶಾಲೆ' ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಈ ಸಭೆಗೆ ನನ್ನ ನಮನ ಎಂದು ಹೇಳಿದರು. ಕಲಾ ಪುರಸ್ಕಾರ ಸ್ವೀಕರಿಸಿದ ಪಂ. ವಿನಾಯಕ ತೊರವಿ ತಾವು ಯಾವುದೇ ದೇಶಕ್ಕೆ, ಹೊರರಾಜ್ಯಗಳಿಗೆ ಕಚೇರಿ ಕೊಡಲು ಹೋದರೆ ಯಾವ ಊರು? ಎಂದು ಸಹಜವಾಗಿ ಕೇಳುತ್ತಾರೆ. 'ಧಾರವಾಡ' ಎಂದರೆ ಸಾಕು. 'ಅಲ್ಲಿ ಎಷ್ಟರ ಜನ ಸಂಗೀತಗಾರರು ಇದ್ದಾರ್ರೀ' ಎಂದು ಉದ್ಗಾರ ತೆಗೆಯುತ್ತಾರೆ. ಈ ನೆಲದ ಮಣ್ಣಿನ ಗುಣ, ಹವಾ, ನೀರು, ಉಸಿರುಗಳಲ್ಲಿ ಸಂಗೀತ ತಾನ–ತಾನವಾಗಿ ಬೆರೆತಿದೆ ಎಂದು ನಾನು ಹೆಮ್ಮೆಯಿಂದ ಹೇಳುತ್ತೇನೆಂದು ತೊರವಿ ವಿವರಿಸಿದರು. ಖ್ಯಾತ ತಬಲಾ ಮಾಂತ್ರಿಕ ಪಂ. ರವೀಂದ್ರ ಯಾವಗಲ್ಲ ಅವರನ್ನೂ ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ದತ್ತಿದಾನಿಗಳಾದ ಬೆಂಗಳೂರಿನ ಅಶ್ವಿನಿ ಚಂದ್ರಶೇಖರ ನಾಡಿಗೇರ, ಜರ್ಮನಿ ನಿವಾಸಿ ಅರ್ಚನಾ ಅವಿನಾಶ ದೇಶಪಾಂಡೆ ಅವರ ಪರವಾಗಿ ಭರತನಾಟ್ಯ ಕಲಾವಿದರಾದ ಶಮಿತಾ ಹಿರೇಮಠ ಹಾಗೂ ಅಶ್ವಿನಿ ನಾಡಿಗೇರ, ಹಾರ್ಮೋನಿಯಮ್ ವಾದಕ ಬೆಳಗಾವಿಯ ವಾಮನ ವಾಗೂಕರ, ತಬಲಾ ವಾದಕ ಅಲ್ಲಮಪ್ರಭು ಕಡಕೋಳ ಅವರನ್ನು ಸತ್ಕರಿಸಲಾಯಿತು.

ಕ.ವಿ.ವ. ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಸತೀಶ ತುರಮರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದತ್ತ ನೀರಲಗಿ ಸ್ವಾಗತಿಸಿದರು. 'ಕಲಾಶ್ರೀ' ಸಂಗೀತ ಸಭಾದ ವಿದ್ಯಾರ್ಥಿಗಳು ಪ್ರಾರ್ಥನೆ ಹಾಡಿದರು. ಮಾಯಾ ರಾಮನ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಕಾರ್ಯಕ್ರಮದಲ್ಲಿ ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ, ಪೂರ್ಣಿಮಾ ಹೆಗಡೆ (ಉಡಿಕೇರಿ) ಹಿರಿಯ ಸಿತಾರ್ ವಾದಕ ಶಿವಾನಂದ ತರ್ಲಘಟ್ಟ, ಮಲ್ಲಿಕಾರ್ಜುನ ತರ್ಲಘಟ್ಟ, ಫಯಾಜ್‌ಖಾನ್, ರಫೀಕ್‌ಖಾನ್, ಶಫೀಕ್‌ಖಾನ್, ಸಂಗೀತಜ್ಞರಾದ ರಘುನಾಥ ನಾಕೋಡ, ರೇಣುಕಾ ನಾಕೋಡ, ಶ್ರೀಪಾದ ಹೆಗಡೆ, ಡಾ. ಶ್ರೀಧರ ಕುಲಕರ್ಣಿ, ಡಾ. ಅರ್ಜುನ ವಠಾರ, ಬಸವಲಿಂಗಯ್ಯ ಹಿರೇಮಠ, ರಾಜು ಕುಲಕರ್ಣಿ, ವೀರಣ್ಣ ಪತ್ತಾರ, ಡಾ. ಉದಯಕುಮಾರ ದೇಸಾಯಿ, ವೆಂಕಟೇಶ ದೇಸಾಯಿ, ನಿಜಗುಣಿ ರಾಜಗುರು, ಎಸ್. ಬಿ. ಗುತ್ತಲ, ಶಾಂತಾರಾಮ ಹೆಗಡೆ, ಗಣೇಶ ಜೋಶಿ, ಕೆ. ಎಸ್. ನಾಡಿಗೇರ, ಶ್ಯಾಮ ನೀರಲಗಿ, ಶ್ರೀಮತಿ ಚೌಶೆಟ್ಟಿ ಮುಂತಾದ ಸಂಗೀತಾಸಕ್ತರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

**ಪ್ರಕಾಶ ಎಸ್. ಉಡಿಕೇರಿ**
ಪ್ರಧಾನ ಕಾರ್ಯದರ್ಶಿಗಳು

ಮೊ: ೯೪೪೮೧-೪೬೮೨೧